**ಎಂ.ವಿ.ಸಿ. ನಂಃ 1297/2025, P.W.-1**

ದಿನಾಂಕಃ06.05.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ 1ನೇ ಎದುರುದಾರರ ಪರಃ

1ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿದ್ದು ಅವರ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತದ ಕಾಲದಲ್ಲಿ ನಾನು ಓಡಿಸುತ್ತಿದ್ದ ಪಲ್ಸರ್ ಬೈಕನ್ನು ಚಲಾಯಿಸಲು ಪರವಾನಗಿ ಇತ್ತು. ಅಪಘಾಿತದ ದಿನ ನಾನು ಆತೂರಿನಿಂದ ರಾಮಕುಂಜದ ಶಾಲೆಯ ಕಡೆಗೆ ಹೋಗುತ್ತಿದ್ದೆ. ನನ್ನ ಬೈಕಿಗೆ ಅಪಘಾತಪಡಿಸಿದ ಕಾರು ರಾಮಕುಂಜದ ಒಳಗಿನ ಪಂಚಾಯತ ರಸ್ತೆಯಿಂದ ಬರುತ್ತಿತ್ತು. ಅಪಘಾತದ ಸ್ಥಳದಲ್ಲಿ ರಸ್ತೆ ನೇರವಾಗಿತ್ತು.

ನಾನು ಸುಮಾರು 100 ಅಡಿ ದೂರದಿಂದ ಕಾರು ಪಂಚಾಯತ ರಸ್ತೆಯಿಂದ ಮುಖ್ಯ ರಸ್ತೆಗೆ ಬರುವುದನ್ನು ನೋಡಿದ್ದೇನೆ. ಅಪಘಾತವಾದಾಗ ಕಾರು ಮುಖ್ಯ ರಸ್ತೆೆಗೆ ಬಂದಿರಲಿಲ್ಲ. ಅಪಘಾತ ಕಾಲದಲ್ಲಿ ಕಾರು ಮುಖ್ಯ ರಸ್ತೆಗೆ ಪಂಚಾಯತ ರಸ್ತೆಯಿಂದ ನಿಧಾನವಾಗಿ ಬರುತ್ತಿರುವುದನ್ನುನೋಡಿಯೂ ಕೂಡಾ ನಾನೇ ವೇಗವಾಗಿ ಬೈಕ ಚಲಾವಣೆ ಮಾಡಿ ಅಪಘಾತಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಂಪೂರ್ಣ ನನ್ನ ತಪ್ಪಿನಿಂದಲೇ ಆಗಿದೆ ಕಾರಿನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ನನ್ನನ್ನು ಪುತ್ತೂರಿನ ಮಹಾವೀರ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ನಾನು ಸುಮಾರು 6 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ.

ನನ್ನ ಎಡ ಕೈನ ಕಿರುಬೆರಳು, ಎಡಕಾಲಿಗೆ ಹಾಗೂ ಸೊಂಟಕ್ಕೆ ಪೆಟ್ಟಾಗಿತ್ತು. ವೈದ್ಯರಾದ ಅಜಯ್ ರವರು ನನಗೆ ಚಿಕಿತ್ಸೆ ಕೊಟ್ಟಿದ್ದಾರೆ. ಮಹಾವೀರ ಆಸ್ಪತ್ರೆಯಲ್ಲಿ ಡಾ.ಪ್ರದೀಪರವರು ಮೂಳೆ ತಜ್ಞರಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಮಹಾವೀರ ಆಸ್ಪತ್ರೆಯಲ್ಲಿ ಡಾ.

ಅಜಯ್ ರವರಿಂದ ನಾನು ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಇಲ್ಲ. ಡಾ. ಅಜಯ್ ರವರು ನನಗೆ ಮಹಾವೀರ ಆಸ್ಪತ್ರೆಯಲ್ಲಿ ಯಾವತ್ತೂ ಕುಡಾ ಚಿಕಿತ್ಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನನ್ನ ಹತ್ತಿರ ಹಣ ಕಡಿಮೆ ಇದ್ದ ಕಾರಣ ಮತ್ತೆ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ಸರಕಾರಿ ಆಸ್ಪತ್ರೆಗೆ ಅಂಗನ್ಯೂನತಾ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಡಾ. ಅಜಯ್ ರವರ ಹತ್ತಿರ ಹೋಗಿದ್ದೇನೆ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ಡಾ. ಪ್ರದೀಪ್ ರವರು ಈಗಲೂ ಕೂಡಾ ಮಹಾವೀರ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾರೆ. ಡಾ.ಪ್ರದೀಪ್ ರವರು ನನಗೆ ಶಾಶ್ವತ ಅಂಗನ್ಯೂನತೆಇಲ್ಲದಿದ್ದ ಕಾರಣ ಅಂಗನ್ಯೂನತಾ ಪ್ರಮಾಣ ಪತ್ರ ಕೊಡುವುದಿಲ್ಲ ಎಂದು ಹೇಳಿದ್ದು ಅದೇ ಕಾರಣಕ್ಕೆ ನಾನು ಸರಕಾರಿ ಆಸ್ಪತ್ರೆಯವೈದರಾದ ಡಾ. ಅಜಯ್ ರವರ ಹತ್ತಿರ ಹೋಗಿ ಸುಳ್ಳು ಅಂಗನ್ಯೂನತಾ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ11ರಲ್ಲಿ ನಮೂದಿಸಿರುವಂತಹ ಶಾಶ್ವತ ಅಂಗನ್ಯೂನತೆ ಅಪಘಾತದಿಂದಾಗಿ ಆಗಿರುವ ಗಾಯಗಳಿಂದ ನನಗೆ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ವಾಕ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವಷ್ಟು ಹಣ ವೈದ್ಯಕೀಯ ಚಿಕಿತ್ಸೆಗೆ ತಗಲಿಲ್ಲ ಎಂದರ ಸರಿಯಲ್ಲ.

ನಾನು ಡ್ರೈವಿಂಗ ಕೆಲಸ ಮಾಡುತ್ತಿದ್ದೆ. ನಾನು ಪ್ರೈವೇಟ ಬಸ್ಸಿನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. ನಾನು 4 ವರ್ಷಗಳಿಂದ ರಾಮಕುಂಜದ ಶಾಲೆಯ ಬಸ್ ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. 1 ವರ್ಷದಿಂದ ನಾನು ರಾಮಕುಂಜದ ಶಾಲೆಯ ಬಸ್ ನ ಚಾಲಕನಾಗಿ ಕೆಲಸ ಮಾಡುತ್ತಿಲ್ಲ. ರಾಮಕುಂಜದ ಶಾಲೆಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಕಾರಣ ನನಗೆ ತಿಂಗಳಿಗೆ 18,000/- ಸಂಬಳ ಬರುತ್ತಿದ್ದ ಬಗ್ಗೆ ದಾಖಲೆ ಇರುತ್ತದೆ. ರಾಮಕುಂಜದ ಶಾಲೆಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಶಾಲೆಯಲ್ಲಿ ಹಾಜರಾತಿ ಪುಸ್ತಕ ಇರುತ್ತದೆ. ಅಪಘಾತವಾದ ನಂತರ 2-3 ತಿಂಗಳು ಕಳೆದ ಮೇಲೆ ಮತ್ತೆ ಶಾಲೆಗೆ ಕೆಲಸಕ್ಕೆ ಹೋಗಿಲ್ಲದಬಗ್ಗೆ ದಾಖಲೆ ಇಲ್ಲ.

ಅಪಘಾತದಿಂದಾದ ಗಾಯಗಳಿಂದ ನನಗೆ ವಾಹನ ಚಾಲನೆ ಮಾಡಲು ಆಗುವುದಿಲ್ಲ ಎಂದು ಸಾರಿಗೆ ಕಚೇರಿಯವರು ನನಗೆ ನೀಡಿದ ಚಾಲನಾ ಪರವಾನಿಗೆಯನ್ನು ಆ ಇಲಾಖೆಗೆ ವಾಪಸ್ಸು ಮಾಡಿಲ್ಲ. ಅಪಘಾತ ಪೂರ್ವ ಏನು ಕೆಲಸ ಮಾಡುತ್ತಿದ್ದೆನು ಅದೇ ಕೆಲಸವನ್ನು ಈಗಲೂ ಕೂಡಾ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾಿತದಿಂದ ಆದ ಗಾಯಗಳಿಂದ ನನಗೆ ಯಾವುದೇ ಆರ್ಥಿಕ ನಷ್ಟ ಮತ್ತು ಉದ್ಯೋಗ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ದಿನ ನನಗೆ 62 ವರ್ಷ ವಯಸ್ಸು ಆಗಿತ್ತು. ನನಗೆ ಅಪಘಾತ ದಿನ 62 ವರ್ಷಕ್ಕೂಹೆಚ್ಚು ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನಾನು ಸುಳ್ಳು ವಾಕ್ಯ ಪ್ರಮಾಣ ಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು